REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2021-2023
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ
# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ವಾರಪತ್ರಿಕೆ

ಸಂಪುಟ : 29 । ಸಂಚಿಕೆ : 11 । ಜೂನ್ 22, 2022 । ಬುಧವಾರ । ಪುಟಗಳು : 8 । ಬೆಲೆ : 2/-

### ದಿನಾಂಕ : 20.06.2022ರಂದು ಬೆಂಗಳೂರಿನಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ಅಧಿಕಾರಿಗಳಿಗೆ

## ಐದು ದಿನಗಳ ವಿಶೇಷ ತರಬೇತಿ ಶಿಬಿರದ ಉದ್ಘಾಟನೆ



**ಬೆಂಗಳೂರು** : ದಿನಾಂಕ : 20.06.2022ರಂದು ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ಮತ್ತು ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ (ಆರ್‌ಐಸಿಎಂ)ಯ ಜಂಟಿ ಸಹಯೋಗದೊಂದಿಗೆ ಪಟ್ಟಣ ಸಹಕಾರ ಬ್ಯಾಂಕುಗಳ ಅಧಿಕಾರಿಗಳಿಗೆ ಏರ್ಪಡಿಸಿದ್ದ ಐದು ದಿನದ ತರಬೇತಿ ಶಿಬಿರವನ್ನು ಭಾರತೀಯ ರಿಜರ್ವ್ ಬ್ಯಾಂಕಿನ ಬೆಂಗಳೂರು ವಲಯದ ಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಮೀನಾಕ್ಷಿ ಗಡ ರವರು ಉದ್ಘಾಟಿಸಿ, ಮಾತನಾಡುತ್ತಾ ರಾಜ್ಯದಲ್ಲಿ 264 ಪಟ್ಟಣ ಸಹಕಾರ ಬ್ಯಾಂಕುಗಳಿದ್ದು, ಅವುಗಳಲ್ಲಿ ಅನೇಕ ಪಟ್ಟಣ ಸಹಕಾರ ಬ್ಯಾಂಕುಗಳು ಎಸ್‌ಎಎಫ್ (SAF)ದಲ್ಲಿ ಬರುತ್ತಿರುವುದನ್ನು ನಾನು ನೋಡುತ್ತಿದ್ದೇನೆ. ಈ ಹಂತದಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ಮತ್ತು ಇತರೇ ತರಬೇತಿ ಸಂಸ್ಥೆಗಳು ಹೆಚ್ಚಿನ ಪ್ರಮಾಣದಲ್ಲಿ ತರಬೇತಿಗಳನ್ನು ಏರ್ಪಡಿಸಿ ಅಧಿಕಾರಿ ಮತ್ತು ಆಡಳಿತ ಮಂಡಳಿ ಸದಸ್ಯರುಗಳಿಗೆ ಮಾರ್ಗದರ್ಶನ ನೀಡುವುದು ಉತ್ತಮವಾಗಿರುತ್ತದೆ.

3ನೇ ಪುಟಕ್ಕೆ...

## ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಕೇಂದ್ರ ಕಛೇರಿ ಬೆಂಗಳೂರು ದಾವಾ ಪಂಚಾಯ್ತಿ ನ್ಯಾಯಾಲಯದ ಪೂರ್ಣ ಪ್ರಮಾಣದ ಪೀಠಾಧಿಕಾರಿಗಳಾಗಿ ಶ್ರೀ ರವೀಂದ್ರ ಜಿ.ಎಂ.

**ಬೆಂಗಳೂರು :** ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಕೇಂದ್ರ ಕಛೇರಿ ಬೆಂಗಳೂರು ದಾವಾ ಪಂಚಾಯ್ತಿ ನ್ಯಾಯಾಲಯದ ಪೂರ್ಣ ಪ್ರಮಾಣದ ಪೀಠಾಧಿಕಾರಿಗಳಾಗಿ ಸಹಕಾರ ಸಂಘಗಳ ಅಪರ ನಿಬಂಧಕರು (ನಿ.441) ಶ್ರೀ ರವೀಂದ್ರ ಜಿ.ಎಂ. ರವರು ದಿನಾಂಕ:20.06.2022ರಂದು ಅಧಿಕಾರ ವಹಿಸಿಕೊಂಡರು. ಈ ಸಂದರ್ಭದಲ್ಲಿ ಇವರನ್ನು ಮಹಾಮಂಡಳದ ಉಪಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರ) ಶ್ರೀ ಎಸ್.ಎಸ್.ಬಣಕಾರ ರವರು ಸನ್ಮಾನಿಸಿ, ಆತ್ಮೀಯವಾಗಿ ಸ್ವಾಗತಿಸಿದರು.



ಮಹಾಮಂಡಳದ ದಾವಾ ಪಂಚಾಯ್ತಿ ನ್ಯಾಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಹಕಾರ ಸಂಘಗಳ ಅಪರ ನಿಬಂಧಕರಾದ ಶ್ರೀ ಆರ್. ಶಿವಪ್ರಕಾಶ ರವರು ಕಾವೇರಿ ಕಾಡಾ ಮೈಸೂರು ಇಲ್ಲಿಗೆ ವರ್ಗಾವಣೆಗೊಂಡ ಹಿನ್ನೆಲೆಯಲ್ಲಿ ಮಹಾಮಂಡಳದ ಉಪಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರ) ಎಸ್.ಎಸ್. ಬಣಕಾರ ಇವರನ್ನು ಸನ್ಮಾನಿಸಿ, ಆತ್ಮೀಯವಾಗಿ ಬೀಳ್ಕೊಟ್ಟರು.

ಒಂದೇ ವಾರದಲ್ಲಿ ರೂ. 36,000 ಕೋಟಿಗೆ ಕುಸಿದ ವಿದೇಶಿ ವಿನಿಮಯ ಮೀಸಲು ಸಂಗ್ರಹ 2

ಚಿನ್ನ ಸಂಗ್ರಹದಲ್ಲಿ ಭಾರತ ಅಗ್ರ ಹತ್ತು ದೇಶಗಳಲ್ಲಿ ಒಂದಾಗಿದೆ 4

ನಿಮ್ಮ ಪ್ರಶ್ನೆ – ನಮ್ಮ ಉತ್ತರ 7

## ಅತ್ಮೀಯ ಸಹಕಾರಿಗಳೇ...



## ಕಪ್ಪು ಹಣ ಸ್ವಿಸ್ ಬ್ಯಾಂಕುಗಳಲ್ಲಿಯೇ ಇದೆ ಹಾಗೂ ಹಣದ ಮೊತ್ತ ರೂ.30,600 ಕೋಟಿಗೇರಿದೆ!

ಸ್ವಿಸ್ ಬ್ಯಾಂಕುಗಳಲ್ಲಿ ಭಾರತೀಯರು ಇರಿಸಿರುವ ಹಣವು ಕಳೆದ ಎರಡು ವರ್ಷಗಳಲ್ಲಿ ಶೇ.50%ರಷ್ಟು ಏರಿಕೆಯಾಗಿದ್ದು, ಏಳು ವರ್ಷಗಳಲ್ಲಿಯೇ ಗರಿಷ್ಠ ಮಟ್ಟ ಮುಟ್ಟಿದೆ. ಪ್ರಸ್ತುತ ಸ್ವಿಸ್ ಬ್ಯಾಂಕಿನಲ್ಲಿರುವ ಭಾರತೀಯರ ಹಣದ ಮೊತ್ತ ರೂ. 30,600 ಕೋಟಿಗೇರಿದೆ. ಇದರಲ್ಲಿ ಅನಿವಾಸಿ ಭಾರತೀಯರು ಅಥವಾ ಬೇರೆ ದೇಶದ ಹೆಸರಿನಲ್ಲಿ ಭಾರತೀಯರು ಇರಿಸಿರುವ ಮೊತ್ತವನ್ನು ಒಳಗೊಂಡಿಲ್ಲ ಎಂದು ಸ್ವಿಟ್ಜರ್ಲೆಂಡ್ ಸೆಂಟ್ರಲ್ ಬ್ಯಾಂಕ್ ಇತ್ತೀಚಿನ ತನ್ನ ವರದಿಯಲ್ಲಿ ತಿಳಿಸಿದೆ.

ಮೇಲ್ನೋಟಕ್ಕೆ ಇಷ್ಟೊಂದು ಅಪಾರ ಹಣ ನ್ಯಾಯದ ರೀತಿಯಲ್ಲಿ ಗಳಿಸಿದ್ದು ಎಂದು ಯಾರೂ ಹೇಳಲು ಸಾಧ್ಯವಿಲ್ಲ. ಇದನ್ನು ಕಪ್ಪುಹಣವೆನ್ನುತ್ತಾರೆ. ನ್ಯಾಯದ ಹಾದಿಯಲ್ಲಿ ಗಳಿಸದ ಮತ್ತು ತೆರಿಗೆಗಳನ್ನು ಪಾವತಿಸದ ಈ ಸಂಪತ್ತನ್ನು ಕಪ್ಪುಹಣವೆಂದೇ ಕರೆಯುತ್ತಾರೆ. ವಂಚನೆ ಮೂಲಕ ಸಂಪಾದಿಸಿದ, ತೆರಿಗೆ ತಪ್ಪಿಸಿದ ಹಣವನ್ನು ಉದ್ಯಮಿಗಳು, ರಾಜಕಾರಣಿಗಳು ವಿದೇಶಿ ಬ್ಯಾಂಕುಗಳಲ್ಲಿ ಇರಿಸುತ್ತಾರೆ.

ಈ ಕುರಿತಂತೆ 2012ರಲ್ಲಿ, ನಾಗರಿಕರ ಜೊತೆ ಸೇರಿ ಖ್ಯಾತ ನ್ಯಾಯವಾದಿ ಮತ್ತು ಮಾಜಿ ಕಾನೂನು ಸಚಿವ ರಾಮ್ ಜೇಠ್ಮಲಾನಿ ಅವರು, ಕಪ್ಪು ಹಣವನ್ನು ಹಿಂದಕ್ಕೆ ತರಲು ಹಾಗೂ ಕಪ್ಪು ಹಣದ ಮತ್ತಷ್ಟು ಸೃಷ್ಟಿಯನ್ನು ತಡೆಗಟ್ಟಲು ಸರ್ವೋಚ್ಚ ನ್ಯಾಯಾಲಯದಲ್ಲಿ ನಿರ್ದೇಶನಗಳನ್ನು ಕೋರಿ ರಿಟ್ ಅರ್ಜಿಯನ್ನು ದಾಖಲಿಸಿದರು.

ಇದೇ ವಿಷಯ, 2014ರ ಚುನಾವಣೆಯಲ್ಲಿ ತಮ್ಮ ಭಾಷಣಗಳಲ್ಲಿ ಪ್ರಸ್ತಾಪಿಸಿದ್ದ ಇಂದಿನ ಪ್ರಧಾನಮಂತ್ರಿಗಳು ತಾವು ಅಧಿಕಾರಕ್ಕೆ ಬಂದ ಕೆಲ ದಿನಗಳಲ್ಲೇ ಸ್ವಿಸ್ ಬ್ಯಾಂಕಿನಲ್ಲಿರುವ ಕಪ್ಪುಹಣವನ್ನು ಹಿಂದೆತರುವುದಾಗಿಯೂ, ಪ್ರತಿಯೊಬ್ಬ ಭಾರತೀಯ ಪ್ರಜೆಗಳ ಖಾತೆಗಳಿಗೂ 15ಲಕ್ಷ ರೂಪಾಯಿ ಹಾಕುವುದಾಗಿಯೂ ಹೇಳಿದ್ದರು. ಇದು ಮತದಾರರನ್ನ ಅವರತ್ತ ವಾಲುವಂತೆ ಮಾಡಿತು. ಚುನಾವಣೆಯಲ್ಲಿ ಅವರಿಗೇ ಅಭೂತಪೂರ್ವ ಜಯ ದೊರಕಿತು. ಮತ್ತೊಂದು ಚುನಾವಣೆಯಲ್ಲೂ ಅವರಿಗೇ ಅಧಿಕಾರ ದೊರೆತು ಒಟ್ಟು ಎಂಟು ವರ್ಷಗಳೇ ಕಳೆದಿವೆ ಆದರೆ, ಕಪ್ಪು ಹಣ ಸ್ವಿಸ್ ಬ್ಯಾಂಕುಗಳಲ್ಲಿಯೇ ಇದೆ ಹಾಗೂ ಹಣದ ಮೊತ್ತ ರೂ. 30,600 ಕೋಟಿಗೇರಿದೆ!

ವಿಷಯ ಅದಲ್ಲ; 2018ರಿಂದ ಸ್ವಿಟ್ಜರ್ಲೆಂಡ್ ಮತ್ತು ಭಾರತದ ನಡುವೆ ಮಾಹಿತಿಯ ಸ್ವಯಂಚಾಲಿತ ವಿನಿಮಯವು ಜಾರಿಯಲ್ಲಿದೆ. ಈ ಚೌಕಟ್ಟಿನ ಅಡಿಯಲ್ಲಿ, 2018 ರಿಂದ ಸ್ವಿಸ್ ಹಣಕಾಸು ಸಂಸ್ಥೆಗಳೊಂದಿಗೆ ಖಾತೆಗಳನ್ನು ಹೊಂದಿರುವ ಎಲ್ಲಾ ಭಾರತೀಯ ನಿವಾಸಿಗಳ ವಿವರವಾದ ಹಣಕಾಸಿನ ಮಾಹಿತಿಯನ್ನು ಅಧಿಕಾರಿಗಳು ಪ್ರತಿವರ್ಷ ಭಾರತಕ್ಕೆ ಒದಗಿಸುತ್ತಿದ್ದಾರೆ. ಆದರೂ, ಕಪ್ಪುಹಣದ ಮಾಹಿತಿ, ವ್ಯಕ್ತಿ ಅಥವಾ ಸಂಸ್ಥೆಯ ಹೆಸರು ಹಾಗೂ ಆಯಾ ಪ್ರಕರಣದಲ್ಲಿ ತೆಗೆದುಕೊಂಡ ಕ್ರಮವೇನು ಎಂದು ಮಾಹಿತಿ ಹಕ್ಕು ಕಾಯ್ದೆ ಅಡಿಯಲ್ಲಿ ಈ ಹಿಂದೆಯೇ ಕೇಳಲಾಗಿತ್ತು. ಅದಕ್ಕೆ ಉತ್ತರಿಸಿರುವ ಕೇಂದ್ರ ಆರ್ಥಿಕ ಸಚಿವಾಲಯ, ತನಗೆ ದೊರೆತಿರುವ ಕಪ್ಪುಹಣದ ಮಾಹಿತಿಯ ರಹಸ್ಯ ಕಾಪಾಡಿಕೊಳ್ಳುವ ದೃಷ್ಟಿಯಿಂದ ಬಹಿರಂಗಪಡಿಸಲು ಸಾಧ್ಯವಿಲ್ಲ ಎಂದು ಹೇಳಿದೆ. ಇರಲಿ, ಇತ್ತ ನಂಬಿದ ಬಡಪಾಯಿ ಮತದಾರ ಬೆಪ್ಪಾಗಿದ್ದಾನೆ.

ಎಚ್.ಕೆ. ಪಾಟೀಲ
ಅಧ್ಯಕ್ಷರು

## ಒಂದೇ ವಾರದಲ್ಲಿ ರೂ. 36,000 ಕೋಟಿಗೆ ಕುಸಿದ ವಿದೇಶಿ ವಿನಿಮಯ ಮೀಸಲು ಸಂಗ್ರಹ




ಜೂನ್ 10ಕ್ಕೆ ಕೊನೆಗೊಂಡ ವಾರದಲ್ಲಿ ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹ 4.599 (35,849 ಕೋಟಿ ರೂ.) ಬಿಲಿಯನ್ ಡಾಲರ್ ಕುಸಿತ ಕಂಡಿದೆ. ಈ ಮೂಲಕ ಫಾರೆಕ್ಸ್ ರಿಸರ್ವ್ 596.458 ಬಿಲಿಯನ್ ಡಾಲರ್‌ಗೆ (46.49 ಲಕ್ಷ ಕೋಟಿ ರೂ.) ಕುಸಿತ ಕಂಡಿದೆ ಎಂದು ಆರ್‌ಬಿಐ ಅಂಕಿ–ಅಂಶಗಳು ತಿಳಿಸಿವೆ.

ಇದಕ್ಕೂ ಹಿಂದಿನ ವಾರದಲ್ಲಿ ವಿದೇಶಿ ವಿನಿಮಯ ಮೀಸಲು 306 ಮಿಲಿಯನ್ ಡಾಲರ್ ಕುಸಿತ ಕಂಡು 601.057 ಬಿಲಿಯನ್ ಡಾಲರ್‌ಗೆ ಇಳಿದಿತ್ತು. ಇದೀಗ ಒಂದೇ ವಾರದಲ್ಲೇ ದೊಡ್ಡ ಪ್ರಮಾಣದಲ್ಲಿ ಕುಸಿತ ಕಂಡು ಪುನಃ 600 ಬಿಲಿಯನ್ ಡಾಲರ್‌ಗಿಂತ ಕೆಳಕ್ಕಿಳಿದಿದೆ. ಜೂನ್ 10ಕ್ಕೆ ಕೊನೆಗೊಂಡ ವಾರದಲ್ಲಿ ಒಟ್ಟಾರೆ ವಿದೇಶಿ ಮೀಸಲಿನಲ್ಲಿ ಪ್ರಮುಖ ಅಂಶವಾದ ಫಾರೇನ್ ಕರೆಂಟ್ ಅಸೆಟ್ಸ್ (ಎಫ್‌ಸಿಎ) ಕುಸಿತದಿಂದಾಗಿ ವಿದೇಶಿ ವಿನಿಮಯ ಮೀಸಲು ತೀವ್ರ ಕುಸಿತ ಕಂಡಿದೆ.

ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (ಆರ್‌ಬಿಐ) ಬಿಡುಗಡೆ ಮಾಡಿದ ಸಾಪ್ತಾಹಿಕ ಅಂಕಿ – ಅಂಶಗಳ ಪ್ರಕಾರ ಜೂನ್10ಕ್ಕೆ ಕೊನೆಗೊಂಡ ವಾರದಲ್ಲಿ ಎಫ್‌ಸಿಎ 4.535 ಬಿಲಿಯನ್ ಡಾಲರ್ ಕುಸಿದು 532.244 ಬಿಲಿಯನ್ ಡಾಲರ್‌ಗೆ ಇಳಿಕೆ ಕಂಡಿದೆ.

ಡಾಲರ್ ಪರಿಭಾಷೆಯಲ್ಲಿ ವ್ಯಕ್ತಪಡಿಸುವುದಾದರೂ ಎಫ್‌ಸಿಎಗಳು ವಿದೇಶಿ ವಿನಿಮಯ ಮೀಸಲುಗಳಲ್ಲಿ ಹೊಂದಿರುವ ಯುರೋ, ಪೌಂಡ್ ಮತ್ತು ಯೆನ್‌ನಂತಹ ಅಮೆರಿಕ ಡಾಲರ್ ಹೊರತಾದ ಕರೆನ್ಸಿಗಳ ಗಳಿಕೆ ಅಥವಾ ಇಳಿಕೆ (ಸವಕಳಿ)ಯ ಪರಿಣಾಮವನ್ನು ಒಳಗೊಂಡಿವೆ. ಚಿನ್ನದ ಮೀಸಲು ಸ್ವಲ್ಪಮಟ್ಟಿಗೆ ಅಂದರೆ 1 ಮಿಲಿಯನ್ ಡಾಲರ್ ಕುಸಿದು 40.842 ಬಿಲಿಯನ್ ಡಾಲರ್‌ಗೆ ಇಳಿಕೆಯಾಗಿದೆ. ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್)ಯೊಂದಿಗಿನ ವಿಶೇಷ ಡ್ರಾಯಿಂಗ್ ಹಕ್ಕುಗಳು (ಎಸ್‌ಡಿಆರ್‌ಗಳು) 23 ಬಿಲಿಯನ್ ಡಾಲರ್‌ನಿಂದ 18.388 ಬಿಲಿಯನ್ ಡಾಲರ್‌ಗೆ ಇಳಿದಿವೆ ಎಂದು ಆರ್‌ಬಿಐ ಹೇಳಿದೆ. ವರದಿಯ ವಾರದಲ್ಲಿ ಐಎಂಎಫ್‌ನೊಂದಿಗಿನ ದೇಶದ ಮೀಸಲು ಸ್ಥಾನವು 40 ಮಿಲಿಯನ್ ಡಾಲರ್ ಕುಸಿತ ಕಂಡಿದ್ದು 4.985 ಬಿಲಿಯನ್ ಡಾಲರ್‌ಗೆ ಕುಸಿದಿದೆ ಎಂದು ಡೇಟಾ ತೋರಿಸಿದೆ.

## ದಿನಾಂಕ : 25.06.2022ರಂದು ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು / ಉಪಾಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿ ಹಾಗೂ ಅಧಿಕಾರಿಗಳಿಗೆ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣ

**ಬೆಂಗಳೂರು :** ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ಮತ್ತು ಎಸ್‌ಟಿಸಿಐ ಪ್ರೈಮರಿ ಡೀಲರ್ ಲಿ., ಇವರ ಸಹಯೋಗದೊಂದಿಗೆ ದಿನಾಂಕ:25ನೇ ಜೂನ್ 2022ರ ಶನಿವಾರದಂದು ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು / ಉಪಾಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿ ಹಾಗೂ ಅಧಿಕಾರಿಗಳಿಗೆ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಮಹಾಮಂಡಳದ ಕೆ.ಎಚ್. ಪಾಟೀಲ ಸಭಾಂಗಣ, ನಂ.132, ಕೆ.ಎಚ್.ರಸ್ತೆ, ಬೆಂಗಳೂರು –560027 ಇಲ್ಲಿ ಏರ್ಪಡಿಸಲಾಗಿದೆ. ಈ ವಿಚಾರ ಸಂಕಿರಣದಲ್ಲಿ Fixed Income Markets in India-Current Trends, Themes & Perspectives. Investment Management. Credit Management. Recent RBI Issue ವಿಷಯಗಳ ಕುರಿತು ನುರಿತ ತಜ್ಞರುಗಳಿಂದ ಉಪನ್ಯಾಸ ನೀಡಲಾಗುವುದು. ಈ ವಿಚಾರ ಸಂಕಿರಣದಲ್ಲಿ ಒಂದು ಬ್ಯಾಂಕಿನಿಂದ ಗರಿಷ್ಠ 3 ಜನರು ಭಾಗವಹಿಸಬಹುದಾಗಿದೆ. ಭಾಗವಹಿಸುವ ಪ್ರತಿನಿಧಿಗಳು ದಿನಾಂಕ : 23.06.2022ರೊಳಗಾಗಿ ಕಡ್ಡಾಯವಾಗಿ ನೋಂದಾಯಿಸಿಕೊಳ್ಳುವಂತೆ ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ ತಿಳಿಸಿರುತ್ತಾರೆ.

## ಹೂಡಿಕೆದಾರರಿಗೆ ಆರು ದಿನಗಳಲ್ಲಿ ರೂ.18 ಲಕ್ಷ ಕೋಟಿ ನಷ್ಟ



**ನವದೆಹಲಿ :** ದೇಶದ ಷೇರುಪೇಟೆ ಸೂಚ್ಯಂಕಗಳು ಕುಸಿದ ಪರಿಣಾಮವಾಗಿ, ಆರು ದಿನಗಳ ಅವಧಿಯಲ್ಲಿ ಹೂಡಿಕೆದಾರರು ರೂ.18.17 ಲಕ್ಷ ಕೋಟಿ ಕಳೆದುಕೊಂಡಿದ್ದಾರೆ. ವಿವಿಧ ದೇಶಗಳ ಕೇಂದ್ರೀಯ ಬ್ಯಾಂಕ್‌ಗಳು ಬಡ್ಡಿ ದರ ಹೆಚ್ಚಿಸುತ್ತಿರುವ ಕಾರಣ, ಜಾಗತಿಕ ಮಟ್ಟದಲ್ಲಿ ಷೇರುಪೇಟೆಗಳಲ್ಲಿ ನಕಾರಾತ್ಮಕ ವಹಿವಾಟು ನಡೆದಿದೆ. ಆರು ದಿನಗಳ ಅವಧಿಯಲ್ಲಿ ಬಿಎಸ್‌ಇ ಸೆನ್ಸೆಕ್ಸ್ 3,959 ಅಂಶ ಇಳಿದಿದೆ. 'ಜಾಗತಿಕವಾಗಿ ಮತ್ತು ದೇಶಿ ಮಾರುಕಟ್ಟೆಗಳಲ್ಲಿ ಕಳೆದು ಕೆಲವು ವಹಿವಾಟು ದಿನಗಳಲ್ಲಿ ಭಾರಿ ಕುಸಿತ ದಾಖಲಾಗಿದೆ. ವಿದೇಶಿ ಹೂಡಿಕೆ ಹೊರಹೋಗುತ್ತಿರುವುದು ಕೂಡ ಹೂಡಿಕೆದಾರರ ವಿಶ್ವಾಸವನ್ನು ಕುಂದಿಸಿದೆ' ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್‌ನ ಸಣ್ಣ ಹೂಡಿಕೆಗಳ ಸಂಶೋಧನಾ ಮುಖ್ಯಸ್ಥ ಸಿದ್ಧಾರ್ಥ ಖೇಮ್ಕ ಹೇಳಿದ್ದಾರೆ.

'ಜಾಗತಿಕವಾಗಿ ಹಣಕಾಸಿನ ನೀತಿ ಬಿಗಿಗೊಳ್ಳುತ್ತಿರುವುದು ಮತ್ತು ಇದರಿಂದಾಗಿ ಆರ್ಥಿಕ ಬೆಳವಣಿಗೆ ಕಡಿಮೆ ಆಗಬಹುದು ಎಂಬ ಭೀತಿಯು ಜಗತ್ತಿನ ಎಲ್ಲೆಡೆ ಷೇರು ಮಾರುಕಟ್ಟೆಗಳಲ್ಲಿ ಇದೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದ್ದಾರೆ.

ಶುಕ್ರವಾರದ ವಹಿವಾಟಿನಲ್ಲಿ ಸೆನ್ಸೆಕ್ಸ್ 135 ಅಂಶ ಇಳಿಕೆ ಕಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 67 ಅಂಶ ಕುಸಿದಿದೆ.

'ವಿದೇಶಿ ಹೂಡಿಕೆ ಹೊರಹೋಗುವುದು ಕಡಿಮೆ ಆಗುವ ಲಕ್ಷಣಗಳೇ ಕಾಣಿಸುತ್ತಿಲ್ಲ. ಇದು ಮಾರುಕಟ್ಟೆಯ ಮೇಲೆ ಪರಿಣಾಮ ಬೀರುತ್ತಿದೆ' ಎಂದು ಕೋಟಕ್ ಸೆಕ್ಯುರಿಟೀಸ್‌ನ ತಾಂತ್ರಿಕ ಸಂಶೋಧನಾ ವಿಭಾಗದ ಡೆಪ್ಯುಟಿ ಉಪಾಧ್ಯಕ್ಷ ಅಮೋಲ್ ಅಠವಳೆ ಹೇಳಿದ್ದಾರೆ.

## ದಿನಾಂಕ : 20.06.2022ರಂದು ಬೆಂಗಳೂರಿನಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ಅಧಿಕಾರಿಗಳಿಗೆ ಐದು ದಿನಗಳ ವಿಶೇಷ ತರಬೇತಿ ಶಿಬಿರದ ಉದ್ಘಾಟನೆ

...ನೇ ಪುಟದಿಂದ

ಭಾರತೀಯ ರಿಜರ್ವ್ ಬ್ಯಾಂಕ್ ಸಹ ಮಹಾಮಂಡಳಕ್ಕೆ ಪಟ್ಟಣ ಸಹಕಾರ ಬ್ಯಾಂಕುಗಳ ಸಮಸ್ಯೆಗಳ ಬಗ್ಗೆ ಪರಿಹಾರ ನೀಡಲು ಸಹಕರಿಸುತ್ತಿದೆ ಎಂದು ತಿಳಿಸಿದರು. ಪಟ್ಟಣ ಸಹಕಾರ ಬ್ಯಾಂಕುಗಳ ಸಮಸ್ಯೆಗಳನ್ನು ನಮ್ಮ ಬೆಂಗಳೂರು ಪ್ರಾಂತೀಯ ಕಛೇರಿಯಿಂದ ಮುಂಬಯಿ ಕೇಂದ್ರ ಕಛೇರಿಗೆ ಶಿಫಾರಸು ಮಾಡುವುದಾಗಿ ತಿಳಿಸಿದರು.

ಮಹಾಮಂಡಳದ ನಿರ್ದೇಶಕರಾದ ಶ್ರೀ ರುದ್ರೇಗೌಡರು ಮಾತನಾಡಿ ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಅಧಿಕಾರಿ ವರ್ಗ ಉತ್ತಮವಾಗಿ ಕಾರ್ಯನಿರ್ವಹಿಸಿದರೆ ಮಾತ್ರ ಬ್ಯಾಂಕುಗಳ ಏಳಿಗೆಗೆ ಅನುಕೂಲ. ಈ ನಿಟ್ಟಿನಲ್ಲಿ ನಮ್ಮ ಪಟ್ಟಣ ಸಹಕಾರ ಬ್ಯಾಂಕುಗಳ ಪ್ರತಿನಿಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಇಂತಹ ದೀರ್ಘಾವಧಿಯ ತರಬೇತಿಯಲ್ಲಿ ಭಾಗವಹಿಸಿ, ತರಬೇತಿಯ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದರು.

ಮಹಾಮಂಡಳದ ಇನ್ನೋರ್ವ ನಿರ್ದೇಶಕರಾದ ಶ್ರೀ ಕೃಷ್ಣ ಎಚ್.ಸಿ ರವರು ಮಾತನಾಡಿ ಪಟ್ಟಣ ಸಹಕಾರ ಬ್ಯಾಂಕುಗಳು ಎನ್‌ಪಿಎ ಸಮಸ್ಯೆಗಳನ್ನು ಪ್ರಮುಖವಾಗಿ ಎದುರಿಸುತ್ತಿದ್ದು, ಏಕೆಂದರೆ ಆಸ್ತಿಯ ಮಾರಾಟ ಮಾಡುವಾಗ ಕೊಳ್ಳುವವರ ಸಂಖ್ಯೆ ಕಡಿಮೆಯಾಗುತ್ತಿರುವ ಹಿನ್ನೆಲೆಯಲ್ಲಿ ಬ್ಯಾಂಕುಗಳ ಎನ್‌ಪಿಎ ಪ್ರಮಾಣವನ್ನು ಕಡಿಮೆಗೊಳಿಸಲು ಸಾಧ್ಯವಾಗುತ್ತಿಲ್ಲ. ಈ ನಿಟ್ಟಿನಲ್ಲಿ ಭಾರತೀಯ ರಿಜರ್ವ್ ಬ್ಯಾಂಕ್ ನಮಗೆ ಎನ್‌ಪಿಎ ಪ್ರಮಾಣದ ನಿರ್ಬಂಧನೆಯನ್ನು ಸಡಿಲಗೊಳಿಸಿದರೆ ಮಾತ್ರ ಬ್ಯಾಂಕುಗಳು ಉತ್ತಮವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ. ಹಾಗೆಯೇ ಈಗ ಭಾರತೀಯ ರಿಜರ್ವ್ ಬ್ಯಾಂಕಿನಲ್ಲಿ ನಮ್ಮ ಕರ್ನಾಟಕದವರೆ ಪ್ರಧಾನ ವ್ಯವಸ್ಥಾಪಕರಾಗಿರುವುದರಿಂದ ನಾವು ಅವರೊಂದಿಗೆ ನಮ್ಮ ಬ್ಯಾಂಕುಗಳ ಕಷ್ಟಗಳನ್ನು ಹೇಳಿಕೊಂಡು ಪರಿಹಾರ ಕಂಡುಕೊಳ್ಳಲು ಅನುಕೂಲವಾಗುತ್ತದೆ ಎಂದರು.

ಪ್ರಾರಂಭದಲ್ಲಿ ತರಬೇತಿ ಶಿಬಿರಕ್ಕೆ ಆಗಮಿಸಿದ ಪಟ್ಟಣ ಸಹಕಾರ ಬ್ಯಾಂಕುಗಳ ಪ್ರತಿನಿಧಿಗಳನ್ನು ಹಾಗೂ ಗಣ್ಯರನ್ನು ಮಹಾಮಂಡಳದ ಮುಖ್ಯಕಾರ್ಯ ನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆಯವರು ಸ್ವಾಗತಿಸಿದರು. ಶ್ರೀಮತಿ ಸೌಮ್ಯ ರವರು ನಿರೂಪಿಸಿದರು. ಕೊನೆಯಲ್ಲಿ ಆರ್‌ಐಸಿಎಂನ ಡೆಪ್ಯುಟಿ ಡೈರೆಕ್ಟರ್‌ರವರಾದ ಶ್ರೀ ಕೆ. ರವಿಚಂದ್ರನ್ ವಂದನಾರ್ಪಣೆಯನ್ನು ಸಲ್ಲಿಸಿದರು. ಈ ವಿಚಾರ ಸಂಕಿರಣದಲ್ಲಿ ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳಿಂದ 57 ಪ್ರತಿನಿಧಿಗಳು ಭಾಗವಹಿಸಿದ್ದರು.

# ಚಿನ್ನ ಸಂಗ್ರಹದಲ್ಲಿ ಭಾರತ ಅಗ್ರ ಹತ್ತು ದೇಶಗಳಲ್ಲಿ ಒಂದಾಗಿದೆ

ರಷ್ಯಾ– ಉಕ್ರೇನ್ ನಡುವಿನ ಸಮರ ಸಂಘರ್ಷ ಆರಂಭವಾದ ಬೆನ್ನಲ್ಲೇ ಜಗತ್ತಿನ ಬಹುತೇಕ ಎಲ್ಲಾ ದೇಶಗಳು ಚಿನ್ನ ಸಂಗ್ರಹಿಸುವಲ್ಲಿ ಪೈಪೋಟಿ ನೀಡುತ್ತಿವೆ. ಭಾರತವೂ ಕೂಡ ಪ್ರತಿ ವರ್ಷ ಚಿನ್ನದ ಸಂಗ್ರಹವನ್ನು ನಿಯಮಿತವಾಗಿ ಹೆಚ್ಚಿಸುತ್ತಾ ಸಾಗಿದೆ. ಪ್ರತಿ ದೇಶಗಳಲ್ಲಿ ಚಿನ್ನದ ನಿಕ್ಷೇಪಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ ಮತ್ತು ದೇಶದಲ್ಲಿ ಆರ್ಥಿಕ ಬಿಕ್ಕಟ್ಟು ಎದುರಾದಾಗ ಹಳದಿ ಲೋಹ ರಕ್ಷಣೆಗೆ ಬರುತ್ತದೆ. ಯಾವುದೇ ರಾಷ್ಟ್ರಕ್ಕೆ ಪ್ರಮುಖ ಆಸ್ತಿಯಾಗಿ ಹೊರಹೊಮ್ಮುತ್ತದೆ. ಚಿನ್ನವನ್ನು ಸಾಮಾನ್ಯವಾಗಿ ದೇಶದ ಕೇಂದ್ರ ಬ್ಯಾಂಕುಗಳು ಚಿನ್ನದ ನಿಕ್ಷೇಪಗಳ ರೂಪದಲ್ಲಿ ಹಿಡಿದಿಟ್ಟುಕೊಳ್ಳುತ್ತವೆ. ಆರ್ಥಿಕ ಕುಸಿತಗಳು ಅಥವಾ ರಾಜಕೀಯ ವಿಚಲನಗಳಿಂದ ಪ್ರಭಾವಿತವಾಗದ ಚಿನ್ನ ಎಂದಿಗೂ ಸ್ಥಿರತೆ ಉಳ್ಳ ಮೌಲ್ಯಯುತ ಆಸ್ತಿಗಳೆನಿಸಿವೆ.

ಭಾರತವು ಅತೀ ಹೆಚ್ಚು ಬಂಗಾರ ಹೊಂದಿರುವ ಅಗ್ರ ಹತ್ತು ದೇಶಗಳಲ್ಲಿ ಒಂದಾಗಿದೆ. ಒಟ್ಟು ಚಿನ್ನದ ಸಂಗ್ರಹದ ದೃಷ್ಟಿಯಿಂದ 2022ರ ಟಾಪ್ 10 ಸ್ಥಾನಗಳಲ್ಲಿರುವ ರಾಷ್ಟ್ರಗಳ ಪಟ್ಟಿಯನ್ನು ಇಲ್ಲಿ ನೀಡಲಾಗಿದೆ.

1. **ಅಮೆರಿಕ :** ವಿಶ್ವದ ದೊಡ್ಡಣ್ಣ ಖ್ಯಾತಿಯ ಅಮೆರಿಕ ಬಹುತೇಕ ಎಲ್ಲಾ ಕ್ಷೇತ್ರಗಳಲ್ಲಿ ಮೊದಲಿನ ಸ್ಥಾನದಲ್ಲಿದೆ. ವಿಶ್ವದ ದೊಡ್ಡ ಆರ್ಥಿಕತೆಯಾಗಿರುವ ಅಮೆರಿಕಾ ಬಂಗಾರ ಸಂಗ್ರಹಣೆಯಲ್ಲಿಯು ಮೊದಲ ಸ್ಥಾನವನ್ನು ಹೊಂದಿದೆ. ಅಮೆರಿಕ ಒಟ್ಟಾರೆ 8,133 ಟನ್‌ಗಳಷ್ಟು ಬಂಗಾರವನ್ನು ಹೊಂದಿದ್ದು, ಇದರಲ್ಲಿ 77 ಪರ್ಸೆಂಟ್‌ನಷ್ಟು ಚಿನ್ನವನ್ನು ವಿದೇಶಿ ವಿನಿಮಯಕ್ಕಾಗಿ ಮೀಸಲಿರಿಸಿದೆ.
2. **ಜರ್ಮನಿ :** ಜರ್ಮನಿ ದೇಶವು ವಿಶ್ವದಲ್ಲಿ ಅತಿ ಹೆಚ್ಚು ಚಿನ್ನವನ್ನು ಸಂಗ್ರಹಿಸುವ ರಾಷ್ಟ್ರಗಳಲ್ಲಿ 2ನೇ ಸ್ಥಾನವನ್ನು ಹೊಂದಿದೆ ಎಂದು ಗೋಲ್ಡ್ ಹಬ್ ವರದಿ ನೀಡಿದೆ. ಜರ್ಮನಿಯ ಒಟ್ಟು ಚಿನ್ನದ ಸಂಗ್ರಹವು 3,359 ಟನ್‌ಗಳಷ್ಟಿದ್ದು, ಈ ರಾಷ್ಟ್ರದ ವಿದೇಶಿ ವಿನಿಮಯ ಮೀಸಲಿನ ಪ್ರಮಾಣ ಭರ್ಜರಿ 73.2 ಪರ್ಸೆಂಟ್ ನಷ್ಟಿದೆ.
3. **ಇಟಲಿ :** ಇಟಲಿ 68.4 ಪರ್ಸೆಂಟ್ ಚಿನ್ನದ ಮೀಸಲು ಗಾತ್ರವನ್ನು ನಿರಂತರವಾಗಿ ಕಾಪಾಡಿಕೊಂಡು ಬಂದಿದೆ. ಇಟಲಿಯಲ್ಲಿ ಈಗಾಗಲೇ 2,451 ಟನ್‌ಗಳಷ್ಟು ಚಿನ್ನವನ್ನು ಹೊಂದಲಾಗಿದ್ದು, ಶ್ರೀಮಂತ ರಾಷ್ಟ್ರವಾಗಿದೆ. ಇದರ ವಿದೇಶಿ ವಿನಿಮಯ ಮೀಸಲಿನ ಪ್ರಮಾಣ ಒಟ್ಟಾರೆ ಚಿನ್ನದಲ್ಲಿ 68.4 ಪರ್ಸೆಂಟ್ ನಷ್ಟಿದೆ.
4. **ಫ್ರಾನ್ಸ್ :** ಫ್ರಾನ್ಸ್ 62.8 ಪರ್ಸೆಂಟ್ ಫ್ರಾನ್ಸಿನ ಸೆಂಟ್ರಲ್ ಬ್ಯಾಂಕ್ ಕಳೆದ ಹಲವು ವರ್ಷಗಳಲ್ಲಿ ಕಡಿಮೆ ಪ್ರಮಾಣದಲ್ಲಿ ತನ್ನ ಚಿನ್ನವನ್ನು ಮಾರಾಟ ಮಾಡಿದೆ. ಈಗಾಗಲೇ 2,436 ಟನ್‌ಗಳಷ್ಟು ಬಂಗಾರ ಹೊಂದಿರುವ ಫ್ರಾನ್ಸ್ ವಿದೇಶಿ ವಿನಿಮಯ ಮೀಸಲಿನ ಪ್ರಮಾಣ ಬರೋಬ್ಬರಿ 62.8 ಪರ್ಸೆಂಟ್‌ನಷ್ಟಿದೆ.
5. **ರಷ್ಯಾ :** ರಷ್ಯಾ 20.2 ಪರ್ಸೆಂಟ್ ರಷ್ಯಾ ಕಳೆದ ಹಲವಾರು ವರ್ಷಗಳಿಂದ ಚಿನ್ನ ರಾಶಿ ಹಾಕುವ ಕಾರ್ಯದಲ್ಲಿ ತೊಡಗಿದ್ದು, ಕಳೆದ ಒಂದು ವರ್ಷದ ಅವಧಿಯಲ್ಲಿ ಇದರ ಪ್ರಮಾಣವನ್ನು ಗಣನೀಯವಾಗಿ ಹೆಚ್ಚಿಸಿಕೊಂಡಿದೆ. 2019ರಲ್ಲಿ ರಷ್ಯಾ 2,252.1 ಟನ್‌ಗಳಷ್ಟು ಬಂಗಾರ ಹೊಂದಿತ್ತು, ಈಗ ಯುದ್ಧದ ನಡುವೆ 2,298.53 ಟನ್‌ಗಳಷ್ಟು ಬಂಗಾರ ಉಳಿಸಿಕೊಂಡಿದೆ. ಇದರಲ್ಲಿ ವಿದೇಶಿ ವಿನಿಮಯ ಮೀಸಲು 20.2 ಪರ್ಸೆಂಟ್ ನಷ್ಟಿದೆ.



6. **ಚೀನಾ :** ಚೀನಾ 2.9 ಪರ್ಸೆಂಟ್ ಯುಎಸ್–ಚೀನಾ ವಾಣಿಜ್ಯ ಸಮರ, ಕೋವಿಡ್ 19 ಸೋಂಕು ಭೀತಿ, ಆರ್ಥಿಕ ಬಿಕ್ಕಟ್ಟಿನ ನಡುವೆ ಚೀನಾ 6ನೇ ಸ್ಥಾನವನ್ನು ಉಳಿಸಿಕೊಂಡಿದೆ. ಚೀನಾದ ವಿದೇಶಿ ಮೀಸಲು ಕೇವಲ 2.9ರಷ್ಟಿದೆ. ಮುಂದಿನ ದಿನಗಳಲ್ಲಿ ಮೀಸಲು ಪ್ರಮಾಣ ಹೆಚ್ಚಿಸುವ ಸಾಧ್ಯತೆಯಿದೆ.
7. **ಸ್ವಿಟ್ಜರ್ಲೆಂಡ್ :** ಸ್ವಿಟ್ಜರ್ಲೆಂಡ್ 6 ಪರ್ಸೆಂಟ್ ವಿಶ್ವದಲ್ಲಿ ಅತಿ ಹೆಚ್ಚು ಚಿನ್ನ ಸಂಗ್ರಹ ಹೊಂದಿರುವ ರಾಷ್ಟ್ರಗಳ ಪೈಕಿ ಸ್ವಿಟ್ಜರ್ಲೆಂಡ್ 7ನೇ ಸ್ಥಾನದಲ್ಲಿದೆ. ಹಾಂಕಾಂಗ್ ಮತ್ತು ಚೀನಾ ನಡುವೆ ಅತಿ ಹೆಚ್ಚು ಚಿನ್ನದ ವ್ಯಾಪಾರವನ್ನು ಹೊಂದಿರುವ ರಾಷ್ಟ್ರ ಸ್ವಿಟ್ಜರ್ಲೆಂಡ್ ಒಟ್ಟಾರೆ 1,040.0 ಟನ್‌ಗಳಷ್ಟು ಚಿನ್ನವನ್ನು ಹೊಂದಿದ್ದು, ಇದರಲ್ಲಿ ವಿದೇಶಿ ವಿನಿಮಯ ಮೀಸಲು 6 ಪರ್ಸೆಂಟ್ ನಷ್ಟಿದೆ.
8. **ಜಪಾನ್ :** ಜಪಾನ್ 2.8 ಪರ್ಸೆಂಟ್ ಜಪಾನ್ ಅತಿ ಹೆಚ್ಚು ಹಳದಿ ಲೋಹ ಹೊಂದಿರುವ 8ನೇ ಅತಿದೊಡ್ಡ ದೇಶ. ಜಪಾನ್ ಸತತವಾಗಿ ಬಂಗಾರದ ದಾಸ್ತಾನು ಹೆಚ್ಚಿಸುತ್ತಾ ಬಂದಿದೆ ಎಂದು ಐಎಂಎಫ್ ಹೇಳಿದೆ. ಐಎಂಎಫ್ ಹಾಗೂ ಗೋಲ್ಡ್ ಹಬ್ ಅಂಕಿ ಅಂಶಗಳ ಪ್ರಕಾರ 2019 ಡಿಸೆಂಬರ್‌ನಲ್ಲಿ ಜಪಾನ್ ಒಟ್ಟಾರೆ 765.2 ಟನ್ ಚಿನ್ನವನ್ನು ಹೊಂದಿತ್ತು. 2022ರಲ್ಲಿ 845 ಟನ್ ಚಿನ್ನ ಹೊಂದಿದೆ.
9. **ಭಾರತ :** ಭಾರತದಲ್ಲಿ 7 ಪರ್ಸೆಂಟ್ ಜನರು ಚಿನ್ನಾಭರಣ ಪ್ರಿಯರು. ಚಿನ್ನದ ಬಳಕೆಯಲ್ಲಿ ದಕ್ಷಿಣ ಏಷ್ಯಾದ ದೇಶಗಳಲ್ಲಿ ಮೊದಲ ಸಾಲಿನಲ್ಲಿ ನಿಲ್ಲುತ್ತದೆ. ಚಿನ್ನದ ಆಮದು ಅಧಿಕವಾಗಿದ್ದರೂ ಚಿನ್ನದ ಸಂಗ್ರಹವನ್ನು ಭಾರತ ಹೆಚ್ಚಿಸುತ್ತಾ ಬಂದಿದೆ. 2019ರಲ್ಲಿ ಭಾರತ 618.2 ಟನ್ ಚಿನ್ನವನ್ನು ಹೊಂದಿತ್ತು. 2022ರಲ್ಲಿ 743.83 ಟನ್ ಚಿನ್ನವನ್ನು ಹೊಂದಿದೆ.
10. **ನೆದರ್ಲೆಂಡ್ಸ್ :** ನೆದರ್ಲೆಂಡ್ಸ್ 68.3 ಪ್ರಸ್ತುತ ತನ್ನ ಚಿನ್ನವನ್ನು ಸಂಗ್ರಹಿಸಿಡಲು ಡಚ್ ಸೆಂಟ್ರಲ್ ಬ್ಯಾಂಕ್ ಸೂಕ್ತ ಸ್ಥಳವನ್ನು ಕೋರಿದೆ. ಅತಿ ಹೆಚ್ಚು ಚಿನ್ನವನ್ನು ಸಂಗ್ರಹಿಸಿರುವ ದೇಶಗಳ ಪೈಕಿ ನೆದರ್ಲೆಂಡ್ಸ್ ಜಾಗತಿಕವಾಗಿ 10ನೇ ಸ್ಥಾನದಲ್ಲಿದೆ. ಈ ರಾಷ್ಟ್ರ ಒಟ್ಟಾರೆ 612 ಟನ್‌ನಷ್ಟು ಬಂಗಾರವನ್ನು ಹೊಂದಿದೆ.

# ಸಾಲದ ಸುಳಿ : ಪಾರಾಗುವುದು ಹೇಗೆ?

ರಾಜೇಶ್‌ಕುಮಾರ್ ಟಿ.ಆರ್., ಚಾರ್ಟರ್ಡ್ ಅಕೌಂಟೆಂಟ್

'ಸಾಲವನು ಕೊಂಬಾಗ ಹಾಲೋಗರುಂಡಂತೆ, ಸಾಲಿಗನು ಬಂದು ಎಳೆವಾಗ – ಕಿಬ್ಬದಿಯ ಕೀಲು ಮುರಿದಂತೆ' ಎನ್ನುತ್ತಾನೆ ಸರ್ವಜ್ಞ. ಹೌದು, ಸಾಲ ಎಂಬುದು ಪಡೆಯುವಾಗ ಸಿಹಿ, ಹಿಂದಿರುಗಿಸುವಾಗ ಕಹಿ. ಅದರಲ್ಲೂ ಮೈತುಂಬಾ ಸಾಲ ಮಾಡಿಕೊಂಡಿದ್ದರಂತೂ ಮುಗಿದೇ ಹೋಯಿತು! ಸಾಲ ಕೊಟ್ಟವರು ಮನೆ ಬಾಗಿಲಿಗೇ ಬಂದು ನಿಮ್ಮ ನೆಮ್ಮದಿ ಕಿತ್ತುಕೊಳ್ಳುತ್ತಾರೆ. ಹಾಗಾದರೆ, ಕೆಟ್ಟ ಸಾಲಗಳಿಂದ ಪಾರಾಗಿ, ಸಾಲದ ಸುಳಿಯಿಂದ ಬಚಾವಾಗುವುದು ಹೇಗೆ ? ಇದರ ಬಗ್ಗೆ ಒಮ್ಮೆ ಗಮನ ಹರಿಸೋಣ.

**01. ಸಾಲಗಳ ಪಟ್ಟಿ ಮಾಡಿ, ಯಾವ ಸಾಲ ಮೊದಲು ಪಾವತಿಸಬೇಕು ಎಂಬುದನ್ನು ಅರಿಯಿರಿ :** ವಾಹನ ಸಾಲ, ವೈಯಕ್ತಿಕ ಸಾಲ, ಚಿನ್ನದ ಮೇಲೆ ಸಾಲ, ಗೃಹ ಸಾಲ, ಕ್ರೆಡಿಟ್ ಕಾರ್ಡ್ ಸಾಲ, ಉದ್ಯಮ ಸಾಲ ಹೀಗೆ ಕೆಲವರು ಎಲ್ಲ ಬಗೆಯ ಸಾಲಗಳನ್ನು ಪಡೆದು ಸಾಲದ ಸುಳಿಗೆ ಸಿಲುಕಿರುತ್ತಾರೆ. ಕೆಲವರಂತೂ ಒಂದು ಹೆಜ್ಜೆ ಮುಂದೆ ಹೋಗಿ ಒಂದು ಸಾಲ ತೀರಿಸಲು ಮತ್ತೊಂದು, ಅದನ್ನು ಸರಿದೂಗಿಸಲು ಇನ್ನೊಂದು ಸಾಲ ಮಾಡುತ್ತಲೇ ಹೋಗುತ್ತಾರೆ.

ಹೀಗೆ ಮಾಡುವುದರಿಂದ ಸಮಸ್ಯೆ ಪರಿಹಾರವಾಗದು. ಮೊದಲನೆಯದಾಗಿ, ಸಾಲಗಳ ಒಂದು ಪಟ್ಟಿಯನ್ನು ಮಾಡಿಕೊಂಡು ಹೆಚ್ಚು ಬಡ್ಡಿ ದರವಿರುವ ಸಾಲಗಳನ್ನು ಬೇಗನೆ ತೀರಿಸಲು ಪ್ರಯತ್ನಿಸಬೇಕು. ಉದಾಹರಣೆಗೆ, ನೀವು ವೈಯಕ್ತಿಕ ಸಾಲ, ವಾಹನ ಸಾಲ ಮತ್ತು ಗೃಹ ಸಾಲ ಪಡೆದುಕೊಂಡಿದ್ದೀರಿ ಎಂದಿಟ್ಟುಕೊಳ್ಳಿ. ಹೀಗಿದ್ದಾಗ ಮೊದಲು ವೈಯಕ್ತಿಕ ಸಾಲ ತೀರಿಸಿ. ಏಕೆಂದರೆ, ವೈಯಕ್ತಿಕ ಸಾಲದ ಬಡ್ಡಿ ದರ ಶೇ.13 ರಿಂದ ಶೇ.18ರವರೆಗೂ ಇರುತ್ತದೆ. ವಾಹನ ಸಾಲದ ಬಡ್ಡಿ ದರ ಶೇ.10 ರಿಂದ ಶೇ.12ರವರೆಗೆ ಇರುವುದರಿಂದ ಈ ಸಾಲ ತೀರಿಸಲು ಎರಡನೆಯ ಆದ್ಯತೆ ಕೊಡಿ.

ಗೃಹ ಸಾಲದ ಬಡ್ಡಿ ದರ ಶೇ.7.5 ರಿಂದ ಶೇ.8.5ರವರೆಗೆ ಇರುವುದರಿಂದ ಮತ್ತು ಇದು ದೀರ್ಘಾವಧಿ ಅಡಮಾನ ಸಾಲವಾಗಿರುವುದರಿಂದ ಗೃಹ ಸಾಲದ ಮರುಪಾವತಿಗೆ ಮೂರನೆಯ ಆದ್ಯತೆ ಕೊಡಿ.

**02. ಸಾಲದ ಅವಧಿಯನ್ನು ತಾತ್ಕಾಲಿಕವಾಗಿ ಹೆಚ್ಚಿಸಿಕೊಳ್ಳಿ :** ಗೃಹ ಸಾಲದಂತಹ ದೀರ್ಘಾವಧಿಯ ಸಾಲಗಳು ಅಥವಾ ಇನ್ಯಾವುದೇ ಮಾದರಿಯ ದೀರ್ಘಾವಧಿಯ ಸಾಲಗಳನ್ನು ಮಾಡಿದ್ದಲ್ಲಿ ಸಾಲದ ಹೊರೆಯನ್ನು ತಾತ್ಕಾಲಿಕವಾಗಿ ಇಳಿಸಿಕೊಳ್ಳುವ ದೃಷ್ಟಿಯಿಂದ ಪ್ರತಿ ತಿಂಗಳು ಪಾವತಿಸುವ ಮಾಸಿಕ ಕಂತು (ಇಎಂಐ ಮೊತ್ತ) ಕಡಿಮೆ ಮಾಡಿಕೊಳ್ಳಿ. ಗೃಹ ಸಾಲವಾಗಿದ್ದ ಪಕ್ಷದಲ್ಲಿ ಬ್ಯಾಂಕ್ ಅಧಿಕಾರಿಗಳ ಜೊತೆ ಮಾತನಾಡಿ ಅವಧಿ ಹೆಚ್ಚಿಸಿಕೊಂಡು ಇಎಂಐ ಮೊತ್ತ ತಗ್ಗಿಸಿಕೊಳ್ಳಿ. ಕೈಸಾಲ ಪಡೆದಿದ್ದರೆ ಅದನ್ನು ಕೊಟ್ಟ ವ್ಯಕ್ತಿಯ ಜೊತೆ ಮಾತನಾಡಿ ಸಾಲದ ಮರುಪಾವತಿಗೆ ಹೆಚ್ಚು ಸಮಯ ಕೇಳಿಕೊಳ್ಳುವ ಜೊತೆಗೆ ಪ್ರತಿ ತಿಂಗಳು ಇಂತಿಷ್ಟು ಮೊತ್ತ ನೀಡುವೆ ಎಂದು ಮಾತು ಕೊಡಿ. ಹೀಗೆ ಮಾಡಿದಾಗ ತಾತ್ಕಾಲಿಕವಾಗಿ ಸಾಲದ ಹೊರೆಯಿಂದ




ಒಂದಿಷ್ಟು ನೆಮ್ಮದಿ ಪಡೆಯಬಹುದು. ಆದರೆ ನೆನಪಿರಲಿ, ಸಾಲದ ಅವಧಿ ಹೆಚ್ಚಿಸಿಕೊಳ್ಳುವುದರಿಂದ ನೀವು ಕಟ್ಟುವ ಬಡ್ಡಿಯ ಪ್ರಮಾಣ ಹೆಚ್ಚುತ್ತದೆ. ಆದ್ದರಿಂದ ತೀರಾ ಅನಿವಾರ್ಯ ಎನ್ನುವ ಸಂದರ್ಭದಲ್ಲಿ ಮಾತ್ರ ಈ ಅನುಕೂಲ ಪಡೆದುಕೊಳ್ಳಿ.

**03. ದೀರ್ಘಾವಧಿ ಸಾಲಗಳ ಬಡ್ಡಿ ಕಡಿಮೆ ಮಾಡಿಕೊಳ್ಳಿ :** ಇಎಂಐ ಹೆಚ್ಚಿಸುವುದರಿಂದ ಸಾಲದ ಅಸಲಿನ ಮೊತ್ತವನ್ನು ಕಡಿಮೆ ಮಾಡಿಕೊಳ್ಳಬಹುದು ಎನ್ನುವುದನ್ನು ಉದಾಹರಣೆ ಸಮೇತ ನೋಡೋಣ. 25 ವರ್ಷಗಳ ಅವಧಿಗೆ ಶೇ.8ರ ಬಡ್ಡಿ ದರದಲ್ಲಿ ರೂ.50 ಲಕ್ಷ ಸಾಲ ಪಡೆದಿದ್ದೀರಿ ಎಂದುಕೊಳ್ಳಿ. ಇದಕ್ಕೆ ರೂ.38,591 ಮಾಸಿಕ ಕಂತಿನ ರೂಪದಲ್ಲಿ ಪಾವತಿಸಬೇಕಾಗುತ್ತದೆ. 25ನೆಯ ವರ್ಷದ ಕೊನೆಯಲ್ಲಿ ಸಾಲದ ಅಸಲು ಮೊತ್ತ ರೂ.50ಲಕ್ಷದ ಜೊತೆಗೆ ಅದಕ್ಕೆ ಬಡ್ಡಿಯಾಗಿ ನೀವು ರೂ.65ಲಕ್ಷ ಕಟ್ಟಬೇಕಾಗುತ್ತದೆ. ರೂ.50ಲಕ್ಷ ಸಾಲಕ್ಕೆ ರೂ.65ಲಕ್ಷ ಬಡ್ಡಿ ಪಾವತಿಸುವುದು ದೊಡ್ಡ ಹೊರೆ. ಈ ದೊಡ್ಡ ಮೊತ್ತದ ಬಡ್ಡಿಯ ಹೊರೆ ಇಳಿಸಿಕೊಳ್ಳಬೇಕು ಅಂದರೆ ಅದಕ್ಕೆ ಎರಡು ಮಾರ್ಗಗಳಿವೆ. ಒಂದನೆಯದ್ದು, ಪ್ರತಿವರ್ಷ ಒಂದು ಇಎಂಐ ಅನ್ನು ಹೆಚ್ಚುವರಿಯಾಗಿ ಪಾವತಿಸುವುದು. ಮತ್ತೊಂದು, ಪ್ರತಿ ವರ್ಷ ಇಎಂಐ ಮೊತ್ತವನ್ನು ಶೇ.10ರಷ್ಟು ಹೆಚ್ಚಳ ಮಾಡುವುದು. ಅಂದರೆ ರೂ.38,591 ಇದ್ದ ಇಎಂಐ ಮೊತ್ತವನ್ನು ಮುಂದಿನ ವರ್ಷ ರೂ.42,450ಕ್ಕೆ ಏರಿಸುವುದು. ಹಾಗೆಯೇ, ಅದರ ಮುಂದಿನ ವರ್ಷ ರೂ.46,695ಕ್ಕೆ ಹೆಚ್ಚಳ ಮಾಡುವುದು. ಇದರ ಜೊತೆಗೆ ಪ್ರತಿ ವರ್ಷ ಒಂದು ಹೆಚ್ಚುವರಿ ಇಎಂಐ, ಅಂದರೆ ವರ್ಷಕ್ಕೆ 12 ಕಂತುಗಳನ್ನು ಕಟ್ಟುವ ಬದಲಿಗೆ 13 ಕಂತುಗಳನ್ನು ಪಾವತಿಸಬೇಕು. ಹೀಗೆ ಮಾಡಿದಾಗ ರೂ.65ಲಕ್ಷ ಬಡ್ಡಿ ಕಟ್ಟುವ ಬದಲಿಗೆ ಒಟ್ಟು ಸಾಲಕ್ಕೆ ನೀವು ರೂ.26,82,514 ರೂಪಾಯಿ ಮಾತ್ರ ಬಡ್ಡಿಯ ರೂಪದಲ್ಲಿ ಪಾವತಿಸುತ್ತೀರಿ.

**04. ಹೆಚ್ಚು ಬಡ್ಡಿ ಇರುವ ಸಾಲ ತೀರಿಸಲು ಕಡಿಮೆ ಬಡ್ಡಿಯ ಸಾಲ ಪಡೆಯಿರಿ :** ಹೆಚ್ಚು ಬಡ್ಡಿಯ ಸಾಲ ತೀರಿಸಲು ಕಡಿಮೆ ಬಡ್ಡಿಯ ಸಾಲ ಪಡೆದರೆ ತಪ್ಪಿಲ್ಲ. ಉದಾಹರಣೆಗೆ ನೀವು ರೂ.1ಲಕ್ಷ ಕ್ರೆಡಿಟ್ ಕಾರ್ಡ್ ಸಾಲ ಪಾವತಿಸಬೇಕು ಎಂದಿಟ್ಟುಕೊಳ್ಳಿ. ಕ್ರೆಡಿಟ್ ಕಾರ್ಡ್ ಬಿಲ್ ಕಟ್ಟದಿದ್ದರೆ ವಾರ್ಷಿಕ ಶೇ.35 ರಿಂದ ಶೇ.45ರಷ್ಟು ಬಡ್ಡಿ ಪಾವತಿಸಬೇಕಾಗುತ್ತದೆ. ಆಗ ಕ್ರೆಡಿಟ್ ಕಾರ್ಡ್ ಸಾಲ ತೀರಿಸಲು ಶೇ.13 ರಿಂದ ಶೇ.16ರ ಬಡ್ಡಿ ದರದಲ್ಲಿ ಸಿಗುವ ವೈಯಕ್ತಿಕ ಸಾಲವನ್ನು ಪಡೆಯಬಹುದು. ಇದರಿಂದ ನಿಮಗೆ ಬಡ್ಡಿ ಹೊರೆ ಕಡಿಮೆಯಾಗುತ್ತದೆ. ಶೇ.35 ರಿಂದ ಶೇ.45ರಷ್ಟು ಬಡ್ಡಿ ಕಟ್ಟುವ ಬದಲು ವೈಯಕ್ತಿಕ ಸಾಲಕ್ಕೆ ಶೇ.13 ರಿಂದ ಶೇ.16ರ ಬಡ್ಡಿ ದರ ಪಾವತಿಸಬೇಕಾಗುತ್ತದೆ.

# ಯುಪಿಐ ಮೂಲಕ ವರ್ಗಾವಣೆ ವೇಳೆ ಹಣ ಕಟ್ ಆಗಿ, ವರ್ಗಾವಣೆ ವಿಫಲವಾದಲ್ಲಿ ಈ 91 892 891 3333 ಸಂಖ್ಯೆಗೆ ವಾಟ್ಸಪ್ ಮಾಡಿ

**ಮುಂಬೈ :** ಯುಪಿಐ ಮೂಲಕ ಹಣ ವರ್ಗಾವಣೆ ತುಂಬಾ ಸುಲಭ. ಆದರೆ ಯುಪಿಐ ವಹಿವಾಟು ವಿಫಲವಾಗುವುದು ಮತ್ತು ಹಣವನ್ನು ಕಡಿತಗೊಳಿಸುವುದು ಪ್ರತಿಯೊಬ್ಬರೂ ಎದುರಿಸುತ್ತಿರುವ ಸಮಸ್ಯೆಯಾಗಿದೆ. ಆದಾಗ್ಯೂ, ಅಂತಹ ಸಂದರ್ಭಗಳಲ್ಲಿ ಏನು ಮಾಡಬೇಕು ಎಂದು ಬಹುತೇಕರಿಗೆ ತಿಳಿದಿಲ್ಲ. ವಾಟ್ಸಪ್ ಮೂಲಕ ಕಂಪ್ಲೈಂಟ್ ಮಾಡಬಹುದು.




ಯುಪಿಐ ಮೂಲಕ ವರ್ಗಾವಣೆ ಮಾಡಿದ ಹಣದ ವಹಿವಾಟು ವಿಫಲವಾಗುವುದು ಎಲ್ಲರಿಗೂ ಎದುರಾಗುವ ಸಮಸ್ಯೆ. ಅವರ ಖಾತೆಯಲ್ಲಿ ಹಣ ಜಮೆಯಾಗಿದ್ದರೂ ಹಣ ಪಾವತಿಯಾಗದಿರುವುದು, ಬೇರೆಯವರಿಗೆ ಹಣ ವರ್ಗಾವಣೆಯಾಗದಿರುವುದು ಸಾಮಾನ್ಯವಾಗಿದೆ. ಯುಪಿಐ ವಹಿವಾಟು ವಿಫಲವಾದಾಗ, ಬಳಕೆದಾರರು ಏನು ಮಾಡಬೇಕೆಂದು ಅರ್ಥವಾಗದೆ ಚಿಂತೆ ಮಾಡುತ್ತಾರೆ.

**ಇದನ್ನು ಗಮನದಲ್ಲಿಟ್ಟುಕೊಂಡು, ನ್ಯಾಷನಲ್ ಪೇಮೆಂಟ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ (NPCI)**

24x7 ಸಹಾಯವಾಣಿಯನ್ನು ಪ್ರಾರಂಭಿಸಿದೆ. ಡಿಜಿಟಲ್ ಪಾವತಿ ಮತ್ತು ಸೇವೆಗಳ ಬಗ್ಗೆ ಮಾಹಿತಿ ನೀಡಲು ಡಿಜಿಸಾಥಿ ಎಂಬ ಸೇವೆಯನ್ನು ಪ್ರಾರಂಭಿಸಿದೆ. ಇದು ಪಾವತಿ ವ್ಯವಸ್ಥೆ ನಿರ್ವಾಹಕರು ಮತ್ತು ಬ್ಯಾಂಕ್‌ಗಳು ಮತ್ತು ಬ್ಯಾಂಕಿಂಗ್ ಅಲ್ಲದ ಹಣಕಾಸು ಕಂಪನಿಗಳಿಂದ ಭಾಗವಹಿಸುವವರ ಒಕ್ಕೂಟವಾಗಿದೆ.

ಡಿಜಿಟಲ್ ಪಾವತಿ ಉತ್ಪನ್ನಗಳು ಮತ್ತು ಸೇವೆಗಳಿಗೆ ಸಂಬಂಧಿಸಿದಂತೆ ಗ್ರಾಹಕರಿಗೆ ಅಗತ್ಯವಿರುವ ಮಾಹಿತಿಯನ್ನು ಪ್ರವೇಶಿಸಲು Digisathi WhatsAppನಲ್ಲಿ ಲಭ್ಯವಿರುತ್ತದೆ. Digisathi ಕೇವಲ ಒಂದು ಸಂದೇಶದ ಮೂಲಕ ವಾಟ್ಸಪ್‌ನಲ್ಲಿ ಚಾಟ್ ಸೌಲಭ್ಯದೊಂದಿಗೆ ಡಿಜಿಟಲ್ ಪಾವತಿಗಳ ಮೇಲಿನ ಎಲ್ಲಾ ಪ್ರಶ್ನೆಗಳಿಗೆ ಬಳಕೆದಾರರಿಗೆ ಸಹಾಯ ಮಾಡುತ್ತದೆ.

ಎಲ್ಲಾ ಬಳಕೆದಾರರು ವಾಟ್ಸಪ್‌ನಲ್ಲಿ +91 892 891 3333 ಗೆ ಸಂದೇಶವನ್ನು ಕಳುಹಿಸಬೇಕು. ಪ್ರಸ್ತುತ ವಾಟ್ಸಾಪ್ ನಲ್ಲಿ ಪ್ರಾರಂಭಿಸಲಾದ ಸೇವೆಯು ಶೀಘ್ರದಲ್ಲೇ ಇತರ ಸಾಮಾಜಿಕ ಮಾಧ್ಯಮ ಪ್ಲಾಟ್ ಫಾರ್ಮ್‌ಗಳಲ್ಲಿಯೂ ಲಭ್ಯವಾಗಲಿದೆ. ಚಾಟ್ ಬಾಟ್ ವೆಬ್ ಸೈಟ್ ಮೂಲಕ ಗ್ರಾಹಕರು ಡಿಜಿಸಾಥಿ ಸೇವೆಗಳನ್ನು ಪ್ರವೇಶಿಸಬಹುದು. ಹೆಚ್ಚಿನ ವಿವರಗಳನ್ನು https://digisaathi.info/ ವೆಬ್‌ಸೈಟ್‌ನಲ್ಲಿ ಕಾಣಬಹುದು. ನೀವು ಟೋಲ್ ಫ್ರೀ ಸಂಖ್ಯೆಗಳಿಗೆ 14431 ಅಥವಾ 1800 891 3333ಗೆ ಕರೆ ಮಾಡಬಹುದು. ಅಥವಾ ನೀವು +91 892 891 3333ಗೆ ವಾಟ್ಸಪ್ ಮಾಡಬಹುದು.

ಭಾರತೀಯ ರಿಸರ್ವ್ ಬ್ಯಾಂಕ್ ಗವರ್ನರ್ ಶಕ್ತಿಕಾಂತ ದಾಸ್ ಅವರು ಇತ್ತೀಚೆಗೆ ಡಿಜಿಸಾಥಿ ಎಂಬ ಸ್ವಯಂಚಾಲಿತ ಪ್ರತಿಕ್ರಿಯೆ ವ್ಯವಸ್ಥೆಯನ್ನು ಪ್ರಾರಂಭಿಸಿದರು. ಡೆಬಿಟ್ ಕಾರ್ಡ್‌ಗಳು, ಕ್ರೆಡಿಟ್ ಕಾರ್ಡ್‌ಗಳು, UPI, NEFT, RTGS, IMPS, PPI ವ್ಯಾಲೆಟ್‌ಗಳು, ATM, ಮೊಬೈಲ್ ಬ್ಯಾಂಕಿಂಗ್, ನೆಟ್ ಬ್ಯಾಂಕಿಂಗ್ ನಂತಹ ಹಲವು ಪ್ರಶ್ನೆಗಳಿಗೆ ಉತ್ತರಗಳನ್ನು ಹುಡುಕಿ.

Digisathi ಪ್ರಸ್ತುತ ಇಂಗ್ಲೀಷ್ ಮತ್ತು ಹಿಂದಿಯಲ್ಲಿ ಲಭ್ಯವಿದೆ. ಇದು ಶೀಘ್ರದಲ್ಲೇ ಇತರ ಭಾಷೆಗಳಲ್ಲಿಯೂ ಲಭ್ಯವಾಗಬಹುದು. ಈ ವೇದಿಕೆಯಲ್ಲಿ ಯಾವುದೇ ಉತ್ಪನ್ನ ಅಥವಾ ಸೇವೆಯನ್ನು ಹೇಗೆ ಬಳಸುವುದು ಎಂಬುದನ್ನು ನೀವು ಹಂತ ಹಂತವಾಗಿ ಕಲಿಯಬಹುದು. ವಹಿವಾಟುಗಳಿಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಗ್ರಾಹಕರು ಉತ್ತರಗಳನ್ನು ಕಂಡುಕೊಳ್ಳಬಹುದು. ಗ್ರಾಹಕರು ಪದೇ ಪದೇ ಕೇಳಲಾಗುವ ಪ್ರಶ್ನೆಗಳಿಗೆ ಉತ್ತರಗಳು FAQ ವಿಭಾಗದಲ್ಲಿವೆ.

ಒಂದು ಗಂಟೆ ಕಾಲ ಯುಪಿಐ ಮೂಲಕ ಪಾವತಿ ಮಾಡಲು ಸಾಧ್ಯವಾಗುತ್ತಿಲ್ಲ ಎಂದು ಬಳಕೆದಾರರು ಇತ್ತೀಚೆಗೆ ಟ್ವಿಟರ್‌ನಲ್ಲಿ ದೂರಿದ್ದಾರೆ ಎಂದು ತಿಳಿದು ಬಂದಿದೆ. Google Pay ಮತ್ತು PhonePay ನಂತಹ UPI ಅಪ್ಲಿಕೇಶನ್‌ಗಳ ಮೂಲಕ ಹಣವನ್ನು ವರ್ಗಾಯಿಸುವಲ್ಲಿ ತೊಂದರೆಗಳು ಉಂಟಾದವು.

ಭಾರತದಲ್ಲಿ ಶೇಕಡಾ 60ಕ್ಕಿಂತ ಹೆಚ್ಚು ಚಿಲ್ಲರೆ ವಹಿವಾಟುಗಳನ್ನು UPI ಖಾತೆಗಳ ಮೂಲಕ ಮಾಡಲಾಗುತ್ತದೆ. ಶೇ.75ರಷ್ಟು ವಹಿವಾಟುಗಳು 100 ರೂ. ಈ ವರ್ಷದ ಮಾರ್ಚ್‌ನಲ್ಲಿ 540 ಕೋಟಿ ರೂ.ಗಳ ಮೂಲಕ 9.60 ಲಕ್ಷ ಕೋಟಿ ವಹಿವಾಟು ನಡೆದಿದೆ.

## ಮಾಸ್ಟರ್ ಕಾರ್ಡ್ ಮೇಲಿನ ನಿರ್ಬಂಧ ತೆರವು ಮಾಡಿದ ಆರ್‌ಬಿಐ

**ನವದೆಹಲಿ :** ಸ್ಥಳೀಯ ದತ್ತಾಂಶ ಸಂಗ್ರಹಣೆ ಮಾನದಂಡಗಳನ್ನು ಪಾಲಿಸುವಲ್ಲಿ ವಿಫಲವಾದ ಕಾರಣ 2021ರ ಜುಲೈ 22 ರಿಂದ ಮಾಸ್ಟರ್ ಕಾರ್ಡ್ ಮೇಲೆ ವಿಧಿಸಲಾಗಿದ್ದ ನಿರ್ಬಂಧಗಳನ್ನು ಆರ್‌ಬಿಐ ಗುರುವಾರ ತೆರವು ಮಾಡಿದೆ. ಅಮೇರಿಕ ಮೂಲದ ಮಾಸ್ಟರ್ ಕಾರ್ಡ್ ಕಂಪನಿ ದತ್ತಾಂಶ ಸಂಗ್ರಹಣ ಮಾನದಂಡಗಳನ್ನು ಪಾಲಿಸುವವರೆಗೆ ಹೊಸ ಗ್ರಾಹಕರನ್ನು ಸೇರ್ಪಡೆ ಮಾಡಿಕೊಳ್ಳಬಾರದು ಎಂದು ಆರ್‌ಬಿಐ ಹೇಳಿತ್ತು. ಸದ್ಯ ಈಗ ಆ ನಿರ್ಬಂಧವನ್ನು ತೆಗೆದು ಹಾಕಲಾಗಿದೆ.

ಮಾಸ್ಟರ್ ಕಾರ್ಡ್ ಏಷ್ಯಾ / ಪೆಸಿಫಿಕ್ ಪ್ರೈವೇಟ್ ಲಿಮಿಟೆಡ್, ಪಾವತಿ ವ್ಯವಸ್ಥೆಯ ದತ್ತಾಂಶ ಸಂಗ್ರಹಣೆಯಲ್ಲಿ ತೃಪ್ತಿದಾಯಕ ಮಾನದಂಡಗಳನ್ನು ಅನುಸರಿಸುತ್ತಿದೆ. ಆದ್ದರಿಂದ, ದೇಶೀಯ ಹೊಸ ಗ್ರಾಹಕರನ್ನು ಸೇರ್ಪಡೆ ಮಾಡಿಕೊಳ್ಳುವುದರ ಮೇಲೆ ಹೇರಲಾಗಿದ್ದ ನಿರ್ಬಂಧಗಳನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ತೆರವು ಮಾಡಲಾಗಿದೆ ಎಂದು ಆರ್‌ಬಿಐ ಹೇಳಿದೆ. ದತ್ತಾಂಶ ಸಂಗ್ರಹಣೆ ಮಾನದಂಡಗಳನ್ನು ಪಾಲಿಸುವಲ್ಲಿ ವಿಫಲವಾದ ಕಾರಣ ಜುಲೈ 22ರಿಂದ ಜಾರಿಗೆ ಬರುವಂತೆ ಅಮೇರಿಕ ಮೂಲದ ಮಾಸ್ಟರ್ ಕಾರ್ಡ್ ಕಂಪನಿ ಹೊಸ ಕ್ರೆಡಿಟ್, ಡೆಬಿಟ್ ಮತ್ತು ಪ್ರಿಪೇಯ್ಡ್ ಕಾರ್ಡ್ ನೀಡುವುದನ್ನು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಅನಿರ್ದಿಷ್ಟಾವಧಿಗೆ ತಡೆಹಿಡಿದಿತ್ತು.

## ನಿಮ್ಮ ಪ್ರಶ್ನೆ ನಮ್ಮ ಉತ್ತರ






▸▸ **ಸುಧಾಕರ್ ಭಟ್,** ಬ್ಯಾಂಕಿಂಗ್ ಸಲಹೆಗಾರರು.

**01. ನಮ್ಮ ಬ್ಯಾಂಕು ಪಂಜಾಬ್ ಮತ್ತು ಮಹಾರಾಷ್ಟ್ರ ಕೋ–ಆಪರೇಟಿವ್ ಬ್ಯಾಂಕ್ (ಪಿಎಂಸಿ)ನಲ್ಲಿ ರೂ.6 ಕೋಟಿ ಠೇವಣಿ ಹೂಡಿಕೆ ಮಾಡಿದೆ. ರಿಜರ್ವ್ ಬ್ಯಾಂಕು ಪಿಎಂಸಿ ಬ್ಯಾಂಕಿನ ಮೇಲೆ ಡೈರೆಕ್ಷನ್ ಹಾಕಿದ ನಂತರ ನಮಗೆ ಅಸಲಾಗಲಿ, ಬಡ್ಡಿಯಾಗಲೀ ಬಂದಿಲ್ಲ. ಮಾರ್ಚ್ 31, 2021ರ ವರೆಗಿನ ಬಡ್ಡಿ ರೂ.0.66ಕೋಟಿ ಸೇರಿ ನಮ್ಮ ಠೇವಣಿ ಮೊತ್ತ ರೂ.6.66ಕೋಟಿಯಾಗಿದ್ದು, ನಮಗೆ ರೂ.5.33ಕೋಟಿ ಮೊತ್ತದ ಶಾಶ್ವತ ಸಂಚಿತವಲ್ಲದ ಆದ್ಯತೆಯ ಷೇರುಗಳನ್ನು ಮತ್ತು ರೂ.1.33ಕೋಟಿ ಮೊತ್ತದ ಇಕ್ವಿಟಿ ವಾರಂಟ್‌ಗಳನ್ನು ನೀಡುವುದಾಗಿ ಯುನಿಟಿ ಸ್ಮಾಲ್ ಫೈನಾನ್ಸ್ ಬ್ಯಾಂಕಿನಿಂದ ಮಾರ್ಚ್ 28, 2022ರಂದು ಪತ್ರ ಬಂದಿದೆ. ನಮ್ಮ ಬ್ಯಾಂಕು ಮಾರ್ಚ್ 2021ರಲ್ಲಿ ಸುಸ್ತಿ ಠೇವಣಿಗಾಗಿ ರೂ.2.40ಕೋಟಿ ಅನುವು ಮಾಡಿದ್ದು, ಮುಂದಿನ ದಿನಗಳಲ್ಲಿ ಯಾವುದೇ ಅನುವು ಮಾಡುವ ಅಗತ್ಯವಿಲ್ಲವೆಂದು ಸಂತೋಷವಾಗಿದ್ದೆವು. ಆದರೆ, ರಿಜರ್ವ ಬ್ಯಾಂಕು ಯುನಿಟಿ ಸ್ಮಾಲ್ ಫೈನಾನ್ಸ ಬ್ಯಾಂಕಿನ ಆದ್ಯತಾ ಷೇರುಗಳ ಮೇಲೆ ಪೂರ್ಣ ಪ್ರಮಾಣದ ಅನುವು ಮಾಡಬೇಕೆಂದು ತನ್ನ ಜೂನ್ 10, 2022ರ ಸುತ್ತೋಲೆಯಲ್ಲಿ ತಿಳಿಸಿರುವುದರಿಂದ ನಮ್ಮ ಎಲ್ಲಾ ಲೆಕ್ಕಾಚಾರ ತಲೆಕೆಳಗಾಗಿದೆ. ನಾವು ಮಾರ್ಚ್ 2022, 2023 ಮತ್ತು 2024ರಲ್ಲಿ ಮಾಡಬೇಕಾದ ಅನುವಿನ ಪ್ರಮಾಣ ಎಷ್ಟು ಎಂದು ವಿವರವಾಗಿ ತಿಳಿಸಿ.**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಬೆಂಗಳೂರು.**

**ಉತ್ತರ :** ಪಿ.ಎಂ.ಸಿ. ಬ್ಯಾಂಕಿನಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳು ಇರಿಸಿದ ಠೇವಣಿ ಮೇಲೆ ಮಾಡಬೇಕಾಗಿರುವ ಅನುವಿನ ಬಗ್ಗೆ ರಿಜರ್ವ್ ಬ್ಯಾಂಕು ತನ್ನ ದಿನಾಂಕ ಜೂನ್ 10, 2022ರ ಸುತ್ತೋಲೆಯಲ್ಲಿ ಸ್ಪಷ್ಟೀಕರಣ ನೀಡಿದೆ. ಮಾರ್ಚ್ 31, 2022ರಂದು ಎಂದಿನಂತೆ ಠೇವಣಿಯ ಶೇ.20ರಷ್ಟು ಪ್ರಮಾಣದ ಅನುವು ಮಾಡಬೇಕು. ಠೇವಣಿಯ ಶೇ.80ರಷ್ಟು ಪ್ರಮಾಣದಲ್ಲಿ ಆದ್ಯತಾ ಷೇರುಗಳು ದೊರೆತ ನಂತರ ಅದರ ಮೇಲೆ ಮಾರ್ಚ್ 31, 2024ರೊಳಗೆ ಪೂರ್ಣ ಅನುವು ಮಾಡಬೇಕಾಗಿದೆ. ಠೇವಣಿಯ ಶೇ.20ರಷ್ಟು ಸಿಗುವ ಇಕ್ವಿಟಿ ವಾರಂಟ್‌ಗಳಿಗೆ ಸದ್ಯಕ್ಕೆ ಯಾವುದೇ ಅನುವಿನ ಅವಶ್ಯಕತೆಯಿಲ್ಲ. ಆರ್ಥಿಕ ವರ್ಷ 2022–23ರಲ್ಲಿ ಠೇವಣಿ ಬದಲಿಗೆ ಆದ್ಯತಾ ಷೇರು ಮತ್ತು ಇಕ್ವಿಟಿ ವಾರಂಟ್‌ಗಳು ಸಿಗುತ್ತವೆ ಎಂದು ಭಾವಿಸಿದಲ್ಲಿ ಬ್ಯಾಂಕು ಮಾಡಬೇಕಾದ ಅನುವಿನ ಪ್ರಮಾಣ ಈ ಕೆಳಗಿನಂತಿರುತ್ತದೆ.

| ವಿವರಗಳು | ರೂ. ಕೋಟಿಗಳಲ್ಲಿ |
|---|---|
| ಠೇವಣಿ | 6.00 |
| ಮಾರ್ಚ್ 31, 2021ರವರೆಗಿನ ಬಡ್ಡಿ | 0.66 |
| ಒಟ್ಟು ಠೇವಣಿ | 6.66 |
| ಆದ್ಯತಾ ಷೇರು 80% | 5.33 |
| ಇಕ್ವಿಟಿ ವಾರಂಟ್ 20% | 1.33 |
| | 6.66 |
| ಅನುವು | |
| ಮಾರ್ಚ್ 31, 2021ರವರೆಗೆ | 2.40 |
| ಮಾರ್ಚ್ 31, 2022ರಂದು | 1.20 |
| ಮಾರ್ಚ್ 31, 2023ರಂದು | 0.87 |
| ಮಾರ್ಚ್ 31, 2024ರಂದು | 0.86 |
| ಆದ್ಯತಾ ಷೇರು ಮತ್ತು ಅನುವು | 5.33 |

ಮಾರ್ಚ್ 31, 2023ರಂದು ರೂ.0.66 ಕೋಟಿ ಬಡ್ಡಿಯನ್ನು ಆದಾಯವೆಂದು ಪರಿಗಣಿಸಬಹುದು.

## ಹಣದುಬ್ಬರ ನಿಯಂತ್ರಣಕ್ಕೆ ಅಂಟಿಕೊಂಡಿದ್ದರೆ ತೊಂದರೆಯಾಗುತ್ತಿತ್ತು : ಶಕ್ತಿಕಾಂತ ದಾಸ್

**ಮುಂಬಯಿ :** ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ತನ್ನ ನೀತಿಗಳ ವಿಚಾರದಲ್ಲಿ ಹಿಂದುಳಿದಿಲ್ಲ ಎಂದು ಹೇಳಿರುವ ಗವರ್ನರ್ ಶಕ್ತಿಕಾಂತ ದಾಸ್, ಹಣದುಬ್ಬರ ದರವನ್ನು ಶೇ.4ಕ್ಕೆ ನಿಗದಿ ಮಾಡಬೇಕು ಎಂಬ ಗುರಿಗೇ ಅಂಟಿಕೊಳ್ಳುವುದು 'ಸಾಂಕ್ರಾಮಿಕದಿಂದ ತತ್ತರಿಸಿದ್ದ ಅರ್ಥ ವ್ಯವಸ್ಥೆ ಪಾಲಿಗೆ ವಿನಾಶಕಾರಿ ಆಗುತ್ತಿತ್ತು ಎಂದು ಹೇಳಿದ್ದಾರೆ.

ಸಾಂಕ್ರಾಮಿಕದ ಸಂದರ್ಭದಲ್ಲಿ ಹೆಚ್ಚಿನ ಹಣದುಬ್ಬರವನ್ನು ಸಹಿಸಿಕೊಳ್ಳುವುದು ಅಗತ್ಯವಾಗಿತ್ತು. ಆ ತೀರ್ಮಾನಕ್ಕೆ ನಾವು ಈಗಲೂ ಬದ್ಧ ಎಂದು ಅವರು ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ. ಒಟ್ಟು ಆಂತರಿಕ ಉತ್ಪಾದನೆಯ ಮಟ್ಟವು ಕೋವಿಡ್ ಪೂರ್ವದ ಮಟ್ಟವನ್ನು ದಾಟಿದೆ ಎಂಬುದನ್ನು ಕಂಡುಕೊಂಡ ನಂತರವೇ ಆರ್‌ಬಿಐ ಹಣದುಬ್ಬರ ನಿಯಂತ್ರಣದ ಕಡೆ ಗಮನ ನೀಡಿತು ಎಂದು ಅವರು ಹೇಳಿದ್ದಾರೆ.

ನಾವು ಸಮಯದ ಅಗತ್ಯ ಏನಿತ್ತೋ ಅದನ್ನು ಮಾಡಿದ್ದೇವೆ. ನಾವು ಹಿಂದೆ ಬಿದ್ದಿದ್ದೆವು ಎಂಬ ಮಾತನ್ನು ಒಪ್ಪುವುದಿಲ್ಲ ಎಂದು ದಾಸ್ ಪ್ರತಿಪಾದಿಸಿದ್ದಾರೆ. ಸಾಂಕ್ರಾಮಿಕದ ಸಂದರ್ಭದಲ್ಲಿ ಹಣಕಾಸಿನ ನೀತಿಯನ್ನು ಬಿಗಿಯಾಗಿ ಇರಿಸಿದ್ದಿದ್ದರೆ, ದೇಶದ ಅರ್ಥ ವ್ಯವಸ್ಥೆ ಹಾಗೂ ಹಣಕಾಸು ಮಾರುಕಟ್ಟೆಗಳ ಮೇಲೆ ಆಗಬಹುದಾಗಿದ್ದ ಹಾನಿಯು ಭಾರಿ ಪ್ರಮಾಣದ್ದಾಗಿರುತ್ತಿತ್ತು. ಸುಧಾರಿಸಿಕೊಳ್ಳಲು ಭಾರತಕ್ಕೆ ವರ್ಷಗಳೇ ಬೇಕಾಗುತ್ತಿತ್ತು ಎಂದೂ ಅವರು ವಿವರಿಸಿದ್ದಾರೆ.



## ಆನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
ಕುತೂಹಲಕಾರಿಯಾದ ಸುದ್ದಿಗಳು ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಬ್ರಿಟನ್ ಸರ್ಕಾರ ಅಕ್ರಮ ವಲಸಿಗರ ಚಲನವಲನ ಪತ್ತೆಗೆ ಪ್ರವಾಸಿಗರ ಕೈಗೆ ಟ್ಯಾಗ್ ಹಾಕುವ ವಿಶೇಷ ಯೋಜನೆಯೊಂದನ್ನು ಕೈಗೆತ್ತಿಕೊಂಡಿದೆ ಇದು ವಲಸಿಗರ ಚಲನವಲನಗಳ ಮೇಲೆ ನಿಗಾ ಇಟ್ಟು ಎಲೆಕ್ಟ್ರಾನಿಕ್ ಟ್ಯಾಗ್ ಮಾಡುತ್ತದೆ.
- ಅಸ್ಸಾಂನ ಗುವಾಹಟಿಯಲ್ಲಿ ಒಂದೇ ಹೆಸರಿನ ತಾಯಂದಿರಿಂದಾಗಿ ಬರೋಬ್ಬರಿ ಮೂರು ವರ್ಷಗಳ ಕಾಲ ಬೇರೆ ಬೇರೆ ತಾಯಿಯ ಬಳಿ ಬೆಳೆದಿದ್ದ ಮಗು, ಅಂತಿಮವಾಗಿ ಡಿಎನ್‌ಎ ಪರೀಕ್ಷೆಯ ಮೂಲಕ ನೈಜ ತಾಯಿಯ ಮಡಿಲು ಸೇರಿದೆ.
- ಬೆಂಗಳೂರಿನ ಕೆ.ಆರ್. ಪುರದ ಬಳಿ ಸುರಿದ ಭಾರೀ ಮಳೆಯಿಂದಾಗಿ ತುಂಬಿ ಹರಿಯುತ್ತಿದ್ದ ರಾಜಕಾಲುವೆಯಲ್ಲಿ 24 ವರ್ಷದ ಸಾಗರ ತಾಲೂಕಿನ ಸಿವಿಲ್ ಎಂಜಿನಿಯರ್ ಮಿಥುನ್ ಕೊಚ್ಚಿ ಹೋಗಿರುವುದಾಗಿ ತಿಳಿದುಬಂದಿದೆ.
- ರಿಲಯನ್ಸ್, ಬಿಪಿ, ಶೆಲ್, ನಯಾರಾದಂತ ಖಾಸಗಿ ಪೆಟ್ರೋಲ್ ಬಂಕ್‌ಗಳು ಸಮಂಜಸವಾದ ಬೆಲೆಯಲ್ಲಿ ಪೆಟ್ರೋಲ್, ಡೀಸೆಲ್ ಸರಬರಾಜುಗಳನ್ನು ನಿರ್ವಹಿಸಬೇಕು ಎಂದು ಕೇಂದ್ರ ಸರಕಾರ ಆದೇಶ ಹೊರಡಿಸಿದೆ.
- ಚಿಕಿತ್ಸೆ ಕೊಡಿಸಲು ಅಪ್ಪನ ಬಳಿ ದುಡ್ಡಿಲ್ಲ, ದುಡಿಮೆಯೂ ಇಲ್ಲ ಜೀವನ ನಡೆಸುವುದೇ ಕಷ್ಟವಾಗಿದೆ, ದಯವಿಟ್ಟು ಅಪ್ಪನಿಗೆ ಕೆಲಸ ಕೊಡಿ ಎಂದು ಕೃತಕ ಕೈ ಜೋಡಣೆ ಮಾಡಿಸಿಕೊಂಡಿರುವ ಎಂಟು ವರ್ಷದ ಬಾಲಕಿ ಮಾಡಿದ ಒಂದೇ ಮನವಿಗೆ ಕರಗಿದ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕರು, ಆಕೆಯ ತಂದೆಗೆ ಮರುನೇಮಕ ಆದೇಶ ಹೊರಡಿಸಿದ್ದಾರೆ.
- ಕೇರಳದಲ್ಲಿ ನೆಲೆಸಿರುವ ವಲಸೆ ಕಾರ್ಮಿಕ ಅಲಾಲುದ್ದೀನ್ ಎಂಬಾತನಿಗೆ ಲಾಟರಿಯಲ್ಲಿ 80 ಲಕ್ಷ ರೂಪಾಯಿ ಬಹುಮಾನ ಬಂದಿದ್ದು ಒಂದೇ ದಿನದಲ್ಲಿ ಲಕ್ಷಾಧಿಪತಿಯಾಗಿದ್ದಾರೆ.
- ಭಾರತದ ಜಾವೆಲಿನ್ ಪಟು ನೀರಜ್ ಚೋಪ್ರಾ ಫಿನ್ಲ್ಯಾಂಡಿನಲ್ಲಿ ನಡೆದ ಕ್ರೀಡಾ ಕೂಟದಲ್ಲಿ ತಮ್ಮ ಮೊದಲ ಪ್ರಯತ್ನದಲ್ಲಿ 86.69 ಮೀಟರ್ ಜಾವೆಲಿನ್ ಎಸೆದು ಚಿನ್ನದ ಪದಕ ಗೆದ್ದಿದ್ದಾರೆ.

## ಓದುಗರ ಅನಿಸಿಕೆ...




**ಗ್ರಾಹಕರ ಒಪ್ಪಿಗೆ ಪಡೆಯುವುದು ಅಗತ್ಯವಲ್ಲವೆ? :** ಕ್ರೆಡಿಟ್ ಕಾರ್ಡ್‌ಗಳನ್ನು ಯುಪಿಐ ಜತೆ ಲಿಂಕ್ ಮಾಡುವ ಬಗ್ಗೆ ಆರ್‌ಬಿಐ ಪ್ರಸ್ತಾವನೆ ಸಲ್ಲಿಸಿದೆ ಆದರೆ, ಕೆಲ ಬ್ಯಾಂಕುಗಳು ಈಗಾಗಲೇ ಈ ವ್ಯವಸ್ಥೆ ಜಾರಿಗೊಳಿಸಿದಂತೆ ಕಾಣುತ್ತಿದೆ. ಗ್ರಾಹಕರೊಬ್ಬರು ತಮ್ಮ ಒಪ್ಪಿಗೆ ಇಲ್ಲದೆ ತಮ್ಮ ಮೂಲಕ ಕ್ರೆಡಿಟ್ ಕಾರ್ಡ್ ಬ್ಯಾಂಕ್ ತಾನಾಗಿಯೇ ಪಾವತಿ ಮಾಡುತ್ತಿರುವುದಾಗಿ ದೂರಿದ್ದಾರೆ. ಇದು ಸರಿಯಲ್ಲ, ಬ್ಯಾಂಕ್ ಹಾಗೆ ಮಾಡುವ ಮುನ್ನ ಗ್ರಾಹಕರ ಒಪ್ಪಿಗೆ ಪಡೆಯುವುದು ಅಗತ್ಯವಲ್ಲವೆ?

**ಶರಣಪ್ಪ ಹಿತ್ತಲಮನಿ, ಹಾವೇರಿ**

**ಸತತವಾಗಿ ಕುಸಿತ ಕಾಣುತ್ತಿದೆ :** ಆರ್‌ಬಿಐ ಹಣದುಬ್ಬರದ ನಿಯಂತ್ರಣಕ್ಕೆ ಹಲವು ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದರೂ ಅದಾವುದು ಫಲ ನೀಡಿದಂತೆ ಕಾಣುತ್ತಿಲ್ಲ. ಷೇರು ಮಾರುಕಟ್ಟೆ ಕೆಲ ದಿನಗಳಿಂದ ಸತತವಾಗಿ ಕುಸಿತ ಕಾಣುತ್ತಿದೆ. ರೂಪಾಯಿ ಬೆಲೆಯೂ ದಾಖಲೆ ಮಟ್ಟಕ್ಕೆ ಕುಸಿಯುತ್ತಿದೆ, ಜೊತೆಗೆ ವಿದೇಶಿ ಹೂಡಿಕೆದಾರರು ಹಣ ಹಿಂದಕ್ಕೆ ಪಡೆಯುತ್ತಿರುವ ಪರಿಣಾಮ, ಮುಂದಿನ ವಾರಗಳಲ್ಲಿ ಷೇರು ಮಾರುಕಟ್ಟೆ ಇನ್ನೂ ಕುಸಿಯುವ ಸಾಧ್ಯತೆ ಇದೆ.

**ರವೀಂದ್ರ ಶೆಣೈ, ಮಂಗಳೂರು**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ
ಬ್ಯಾಂಕುಗಳ ಮಹಾಮಂಡಳ ನಿ.,
ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, # 35, 3rd Cross, Sudhamanagar, Bangalore – 560027.